
# ಅಂತರ್ಜಾಲ–ರಾಜಕಾರಣದ ಅಮಲು ಹೊಸ ವರ್ಷ ತರಲಿ ತಿಳಿವಿನ ಗಮಲು



ನಮ್ಮ ಕಾಳಜಿ ಇರಬೇಕಾದದ್ದು ಸಮಾಜದ ಅಂಚಿನಲ್ಲಿರುವವರ ಬವಣೆಗಳ ಬಗ್ಗೆ. ಯಾವುದೇ ಕಾಯ್ದೆ ಬದುಕಿಗಿಂತ ದೊಡ್ಡದಲ್ಲ.




**ಕಾವ್ಯಾ ಕಡಮೆ ನಾಗರಕಟ್ಟೆ**
ಕವಯಿತ್ರಿ

ಈಗಾಗಲೇ ಅಂತರ್ಜಾಲ ಮತ್ತು ಸಾಮಾಜಿಕ ಜಾಲತಾಣಗಳು ನಮ್ಮ ಬದುಕಿನೊಂದಿಗೆ ಬೇರ್ಪಡಿಸಲಾಗದಷ್ಟು ಹೊಂದಿಕೊಂಡಾಗಿದೆ. ಹೊಸ ವರ್ಷದಲ್ಲಾದರೂ ಅಂತರ್ಜಾಲದ ಅಂತರಂಗದ ಕುರಿತ ಅರಿವನ್ನು ನಾವೆಲ್ಲ ಬೆಳೆಸಿಕೊಳ್ಳಬೇಕಿದೆ.

ಈ ವರ್ಷವೇ ಹೊಸ ಮಗುವಿನ ತಾಯಿಯಾದ ನನಗೆ ಪುಟ್ಟ ಮಗುವನ್ನು ಅಂತರ್ಜಾಲದ ಕರಾಳಹಸ್ತದಿಂದ ಹೇಗೆ ಕಾಪಾಡಿಕೊಳ್ಳಬೇಕೆಂದು ಸಂಕಟವಾಗುವಂಥ ಸುದ್ದಿಗಳನ್ನು ಇತ್ತೀಚೆಗೆ ಕೇಳುತ್ತಿರುವೆ. ಪುಟ್ಟ ಮಕ್ಕಳನ್ನು ಕಾಮತೃಷೆಗಾಗಿ ಬಳಸಿಕೊಳ್ಳುವ ವಿಕೃತಿಯುಳ್ಳವರು ಅಂತರ್ಜಾಲ ಒದಗಿಸುವ ಅನಾಮಿಕತೆಯಡಿಯಲ್ಲಿ ಒಂದಾಗುತ್ತಿದ್ದಾರೆ. ಸುಮ್ಮನೇ ನಾವು ಫೇಸ್‌ಬುಕ್ಕಿನಲ್ಲಿ ಅಪ್‌ಲೋಡ್ ಮಾಡಿದ ಮಗುವಿನ ಚಿತ್ರ, ವಿಡಿಯೊ ಡಾರ್ಕ್‌ವೆಬ್‌ನಲ್ಲಿ ಪತ್ತೆಯಾಗುತ್ತಿವೆ. ‘ಫೋರ್ಟ್‌ನೈಟ್’ ಮುಂತಾದ ಗೇಮ್‌ಗಳನ್ನು ಇಂಟರ್‌ನೆಟ್‌ನಲ್ಲಿ ಆಡುವ ಆರು–ಎಂಟು ವರ್ಷದ ಮಕ್ಕಳಿಗೆ ಆಟದಲ್ಲಿ ಸಹಾಯ ಮಾಡುವ ನೆಪವೊಡ್ಡಿ ಸ್ನೇಹ ಗಳಿಸಿಕೊಂಡು ನಂತರ ಅವರ ನಗ್ನಚಿತ್ರ ಕಳಿಸಲು ಬೇಡಿಕೆಯಿಡಲಾಗುತ್ತದೆ. ಆ ಒಂದು ಚಿತ್ರವನ್ನಿಟ್ಟುಕೊಂಡು ಇನ್ನೂ ಹೆಚ್ಚು ಚಿತ್ರಗಳನ್ನು ಕಳುಹಿಸಲು ಮಕ್ಕಳನ್ನು ಬ್ಲಾಕ್‌ಮೇಲ್ ಮಾಡಲಾಗುತ್ತದೆ. ತಂದೆ ತಾಯಿಯರಿಗೆ ತಮ್ಮ ಗುಟ್ಟೆಲ್ಲಿ ತಿಳಿದುಬಿಡುತ್ತದೋ ಎಂಬ ಭಯದಲ್ಲಿ ಮಕ್ಕಳು ತಮ್ಮ ಫೋಟೊಗಳ ಜೊತೆಗೆ ಒಡಹುಟ್ಟಿದವರ, ತಂದೆ–ತಾಯಿಯರ ಛಾಯಾಚಿತ್ರಗಳನ್ನೂ, ವಿಡಿಯೊಗಳನ್ನೂ, ತೀರಾ ವೈಯಕ್ತಿಕ ಸಂಗತಿಗಳನ್ನೂ ಆಗಂತುಕರೊಂದಿಗೆ ಹಂಚಿಕೊಳ್ಳುತ್ತಿರುವುದು ಪತ್ತೆಯಾಗಿದೆ. ಹೀಗೆ ಪುಟ್ಟ ಮಕ್ಕಳು ತಮಗರಿವಿಲ್ಲದೇ ಅಂತರ್ಜಾಲದ ಸುಳಿಯಲ್ಲಿ ಸಿಕ್ಕು ಖಿನ್ನತೆಗೆ ಜಾರುತ್ತಿದ್ದಾರೆ. ಅಂತರ್ಜಾಲಕ್ಕೆ ಮರೆವು ಎಂಬುದು ಇಲ್ಲವಾದುದರಿಂದ ಈ ಚಿತ್ರಗಳು ಎಷ್ಟು ಡಿಲೀಟ್ ಮಾಡಿದರೂ

## ಸ್ವಚ್ಛ ನೀರು, ಶುದ್ಧ ಗಾಳಿ, ಒಂದಿಷ್ಟು ಸ್ವಾತಂತ್ರ್ಯ

ಆದರ್ಶ ರಾಜ್ಯವನ್ನು ನಿರೀಕ್ಷಿಸುವ ಪರಿಸ್ಥಿತಿಯಲ್ಲಿ ನಾವಿಲ್ಲ. ಆದರೆ ಬದುಕಲು ಅಗತ್ಯವಾದ ಮೂಲಭೂತ ಸೌಕರ್ಯಗಳು ಮತ್ತು ಸ್ವಾತಂತ್ರ್ಯವನ್ನೂ ಹೋರಾಡಿ ಪಡೆದುಕೊಳ್ಳಬೇಕಾದ ಪರಿಸ್ಥಿತಿಯಂತೂ ಖಂಡಿತ ಇದೆ.




**ಕೃಪಾಕರ - ಸೇನಾನಿ**
ಪರಿಸರ ತಜ್ಞರು

‘ಗಡಿಗಳಿರಬಾರದು. ಕಂದಕಗಳಿರಬಾರದು. ಗೋಡೆಗಳಂತೂ ಇರಲೇಬಾರದು. ಮೂಢನಂಬಿಕೆ, ಅಪನಂಬಿಕೆ, ಅನೈತಿಕತೆ, ದ್ವೇಷ, ಅಸೂಯೆಗಳೆಂಬ ಪದಪುಂಜಗಳು ಕಣ್ಮರೆಯಾಗಬೇಕು. ವರ್ಗರಹಿತ ವ್ಯವಸ್ಥೆ ಅಸ್ತಿತ್ವದಲ್ಲಿರಬೇಕು. ಮಾನವೀಯ ಮೌಲ್ಯಗಳು ಸ್ವಚ್ಛಂದವಾಗಿ ವಿಹರಿಸಬೇಕು. ಕಲೆ, ವಿಜ್ಞಾನ, ಸಾಹಿತ್ಯಗಳು ಸಂಸ್ಕೃತಿಯಾಗಿ ವಿಜೃಂಭಿಸಬೇಕು. ಚರ್ಚೆ, ನಿಲುವು, ಅನಿಸಿಕೆಗಳೆಲ್ಲ ಮುಕ್ತವಾಗಿರಬೇಕು’.

ತತ್ವಜ್ಞಾನಿ ಥಾಮಸ್ ಮೋರ್ ತನ್ನ ‘ಯುಟೋಪಿಯನ್’ ಕೃತಿಯಲ್ಲಿ ಹೀಗೆಲ್ಲ ಕನವರಿಸುತ್ತಾನೆ. ಈ ಕಾಲ್ಪನಿಕ ಅಲೆದಾಟದಲ್ಲಿ ಒಂದು ಪರಿಪೂರ್ಣ ಸಮಾಜ ಹೇಗಿರಬೇಕೆಂದು ಕಲ್ಪಿಸಿಕೊಳ್ಳುತ್ತಾನೆ.

ನಿಜ. ಇದು ಎಂದಿಗೂ ಸಾಧ್ಯವಾಗದ ಕನಸಾಗಿರಬಹುದು. ಆದರೆ ಅಂದಿನ ಸಮಾಜ ಅವನ ಕನಸಿನ ಹಕ್ಕನ್ನು ಕೂಡ ಕಸಿದುಕೊಂಡಿತು. ಮುಂದೊಂದು ದಿನ ರಾಜನ ವಿರುದ್ಧ ನಿರ್ಭೀತ ಹೇಳಿಕೆ ನೀಡಿದ್ದಕ್ಕೆ ಅವನು ಮರಣದಂಡನೆಗೆ ತುತ್ತಾದ.

ಥಾಮಸ್ ಮೋರ್‌ನ ಕನಸು ಕೃತಿಯಾಗಿ ಹಲವು ವರ್ಷಗಳು ಉರುಳಿದ್ದವು. ಗೆಲಿಲಿಯೊ ನಿಶ್ಚಲವಾಗಿ ಮಲಗಿದ್ದ ಭೂಮಿಗೆ ಚಾಲನೆ ನೀಡಿದ್ದ. ಧರ್ಮಾಂಧರಿಗೆ ಆ ಚಲನೆ ಬೇಕಿರಲಿಲ್ಲ! ಗೆಲಿಲಿಯೊಗೆ ಬಹಿಷ್ಕಾರ ಹಾಕಿದರು. ಜೈಲು ಶಿಕ್ಷೆ ನೀಡಿದರು.

ಗೆಲಿಲಿಯೊ ಸತ್ತ ಐವತ್ತು ವರ್ಷಗಳ ಬಳಿಕ ಸಮಾಜ ತಾನು ಎಸಗಿದ ಅಮಾನುಷ ಕೃತ್ಯಕ್ಕೆ ತಲೆತಗ್ಗಿಸಿತು. ಪಶ್ಚಾತ್ತಾಪ ಪಟ್ಟಿತು. ಗೆಲಿಲಿಯೊನ ವಿಜ್ಞಾನ ಗೆದ್ದಿತ್ತು. ಆತ ಮತ್ತೆ ಎದ್ದು ನಿಂತಿದ್ದ; ರಾಷ್ಟ್ರದ ರಾಜಬೀದಿಯಲ್ಲಿ ಪ್ರತಿಮೆಯಾಗಿ!

ಇತಿಹಾಸದುದ್ದಕ್ಕೂ ಜ್ಞಾನ ಮತ್ತು ಅಜ್ಞಾನದ ನಡುವೆ ಸಂಘರ್ಷಗಳು